ದಿನಾಂಕ : 02-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ಶ್ರೀ. ಎಮ್.ಎಸ್.ಪಿ ವಕೀಲರಿಂದ**

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನ್ನ ಮೇಲೆ ಕೇಸು ಆಗಿದೆ ಅದು ನಡೆಯುತ್ತಿದೆ ಎನ್ನುವುದು ಸರಿ. 1ನೇ ಆರೋಪಿಯವರ ತಂಗಿ ಚಾಸಾಃ 17 ಪ್ರಾಸಾಃ 14 ರಾಜಶ್ರೀ ನನಗೆ ಗೊತ್ತಿರುತ್ತಾರೆ. ಆಕೆಗೆ ಮದುವೆ ಆಗಿದ್ದು, ಆಕೆ ಗಂಡನ ಮನೆಯಲ್ಲಿರುತ್ತಾಳೆ ಎನ್ನುವುದು ಸರಿ. ಸದರಿ ಚಾಸಾಃ 17 ಪ್ರಾಸಾಃ 14 ರಾಜಶ್ರೀ ಅವರಿಗೆ ನಾನು ಪೋನ ಮಾಡುತ್ತಿರಲಿಲ್ಲ, ಆದರೆ ಆಕೆಯೇ ನನಗೆ ಪೋನ ಮಾಡುತ್ತಿದ್ದಳು. ನಾನು ಚಾಸಾಃ 17 ಪ್ರಾಸಾಃ 14 ರಾಜಶ್ರೀ ಅವರಿಗೆ ಪೋನ ಮಾಡುತ್ತಿದ್ದ ವಿಚಾರದಲ್ಲಿ ಆರೋಪಿತರು ನನಗೆ ಕರೆದು ಬುದ್ಧಿ ಹೇಳುತ್ತಿದ್ದರು ಎನ್ನುವುದು ಸರಿಯಲ್ಲ.

2. 1ನೇ ಆರೋಪಿ ಮಲ್ಲೇಶ ಮತ್ತು 2ನೇ ಆರೋಪಿ ಸುರೇಶ ಮಾಳಿ ಅವರು ನನ್ನನ್ನು ಮೋಟರಸೈಕಲನಲ್ಲಿ ಅಪಹರಿಸಿಕೊಂಡು ಹೋಗಿ ನನಗೆ ಹೊಡೆದಿರುತ್ತಾರೆ ಎಂದು, ನನ್ನ ಜಾತಿ ಹೆಸರು ಹಿಡಿದು ನನಗೆ ಬೈದು ಅವಮಾನ ಮಾಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

3. ಮೋಟರಸೈಕಲ ಮೇಲೆ ಹೋಗುವಾಗ ನಾನು ಆಯತಪ್ಪಿ ಕೆಳಗೆ ಬಿದ್ದಿದ್ದರಿಂದ ನನ್ನ ಬೆನ್ನಿಗೆ ಗಾಯ ಆಗಿರುತ್ತದೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಆರೋಪಿತರು ನನಗೆ ಹೊಡೆದಿರುತ್ತಾರೆ ಎಂದು ಹೇಳಿದ್ದಾರೆ.

4. 1ನೇ ಆರೋಪಿ ನನ್ನ ಮೇಲೆ ಮತ್ತು ಇತರರ ಮೇಲೆ ದೂರು ಕೊಟ್ಟ ಕಾರಣ ನಾವುಗಳು ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿದ್ದೇವೆ ಎನ್ನುವುದು ಸರಿಯಲ್ಲ.

ಆರೋಪಿತರು ನನಗೆ ಹೊಡೆದಿಲ್ಲ ಎನ್ನುವುದು ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತಹ ಯಾವುದೇ ಘಟನೆ ಆಗಿಲ್ಲ, ಆದರೂ ಸಹ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.